30/1

# 1999

# MANAGEMENT

## Paper 1

*Time : 3 Hours ]* *[ Maximum Marks : 300*

### *INSTRUCTIONS*

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket.*

*Candidates should attempt any* ***five*** *questions.*

*All questions carry equal marks.*

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

[Turn over

1. Human behaviour can be classified into two categories of characteristics. List and explain them in detail.

2. What are the various causes of conflict ? What steps can be taken to reduce and resolve conflict that is behavioural in nature ?

3. A leader has certain inherent qualities and traits which assist him in playing a directing role and wielding commanding influence over others. Enumerate these qualities and traits and explain them.

4. Decision making involves four basic phases. Explain those four basic phases to make a wise decision rationally.

5. The broad questions that executives face time and again will be, "What degree of decentralisation is desirable and what are the obstacles in achieving decentralisation ?" Under the rapid changes in our economy, how should an organisation try to answer the above two questions ?

6. Discuss the traditional and modern techniques of capital investment appraisal bringing out their relative merits and demerits.

7. Goods are to be transported from the production centres $P_1$, $P_2$ and $P_3$ to the different markets $M_1$, $M_2$, $M_3$ and $M_4$. The availability in the three production centres is 250, 300 and 350 tons of the materials. The requirements at the markets are 150, 250, 200 and 300 respectively. The unit costs of transportation from the different production centres to the markets are as given below.

| From/To | $M_1$ | $M_2$ | $M_3$ | $M_4$ |
|---|---|---|---|---|
| $P_1$ | 4 | 7 | 5 | 6 |
| $P_2$ | 7 | 4 | 3 | 8 |
| $P_3$ | 7 | 5 | 9 | 4 |

Determine the optimum allocation that will minimise the total cost of transportation.

8. Write short notes on :

(i) Applications of normal distribution

(ii) Decision making under certainty, uncertainty and risk

1. ಮಾನವನ ವರ್ತನೆಯನ್ನು ವಿಶಿಷ್ಟಲಕ್ಷಣಗಳ ಎರಡು ಗುಂಪುಗಳಾಗಿ ವರ್ಗೀಕರಿಸಬಹುದು. ಅವುಗಳನ್ನು ಪಟ್ಟಿಮಾಡಿ ಮತ್ತು ವಿವರವಾಗಿ ನಿರೂಪಿಸಿ.

2. ಸಂಘರ್ಷದ ವಿವಿಧ ಕಾರಣಗಳು ಯಾವುವು ? ವರ್ತನಾಸ್ವರೂಪದ್ದಾಗಿರುವ ಸಂಘರ್ಷವನ್ನು ಕಡಿಮೆ ಮಾಡಲು ಮತ್ತು ಪರಿಹರಿಸಲು ಯಾವ ಕ್ರಮಗಳನ್ನು ಕೈಗೊಳ್ಳಬಹುದು ?

3. ನಾಯಕನಾದವನಲ್ಲಿ ಕೆಲವು ಅಂತರ್ಗತಗುಣಗಳು ಮತ್ತು ಸ್ವಭಾವಗಳಿರುತ್ತವೆ. ಇನ್ನೊಬ್ಬರನ್ನು ನಿರ್ದೇಶಿಸುವಂತಹ ಪಾತ್ರ ವಹಿಸಲು ಹಾಗೂ ಇತರರ ಮೇಲೆ ಆಧಿಪತ್ಯದ ಪ್ರಭಾವ ಬೀರಲು ಅವು ಅವನಿಗೆ ನೆರವಾಗುತ್ತವೆ. ಈ ಗುಣ ಮತ್ತು ಸ್ವಭಾವಗಳು ಯಾವುವು ಎಂಬುದನ್ನು ತಿಳಿಸಿ ಮತ್ತು ವಿವರಿಸಿ.

4. ನಿರ್ಣಯ ಕೈಗೊಳ್ಳುವುವಿಕೆಯಲ್ಲಿ ಮೂಲತಃ ನಾಲ್ಕು ಮಜಲುಗಳಿವೆ. ವಿವೇಚನಾಯುತವಾಗಿ ಒಂದು ಉತ್ತಮ ನಿರ್ಣಯವನ್ನು ಮಾಡಲು ನೆರವಾಗುವ ಈ ನಾಲ್ಕು ಮಜಲುಗಳನ್ನು ವಿವರಿಸಿ.

5. ಆಡಳಿತಾಧಿಕಾರಿಗಳಿಗೆ ಮೇಲಿಂದ ಮೇಲೆ ಎದುರಾಗುವ ಸಾಮಾನ್ಯ ಪ್ರಶ್ನೆಗಳೆಂದರೆ, "ಎಷ್ಟು ಪ್ರಮಾಣದ ವಿಕೇಂದ್ರೀಕರಣ ಅಗತ್ಯ ? ಹಾಗೂ ವಿಕೇಂದ್ರೀಕರಣ ಸಾಧಿಸುವಲ್ಲಿ ಎದುರಾಗುವ ಅಡಚಣೆಗಳೇನು ?" ನಮ್ಮ ಆರ್ಥಿಕ ವ್ಯವಸ್ಥೆ ತ್ವರಿತವಾಗಿ ಬದಲಾಗುತ್ತಿರುವ ಸಂದರ್ಭದಲ್ಲಿ ಒಂದು ಸಂಸ್ಥೆಯು ಮೇಲ್ಕಂಡ ಪ್ರಶ್ನೆಗಳಿಗೆ ಯಾವ ರೀತಿ ಉತ್ತರ ಕಂಡುಕೊಳ್ಳಬೇಕು ?

6. ಬಂಡವಾಳ ಹೂಡಿಕೆಯ ಸಾಂಪ್ರದಾಯಿಕ ಹಾಗೂ ಆಧುನಿಕ ತಂತ್ರಗಳ ಮೌಲ್ಯನಿರೂಪಣೆಯನ್ನು ಕುರಿತು ಚರ್ಚಿಸಿ. ಅವುಗಳ ಸಾಪೇಕ್ಷ ಅರ್ಹತೆ, ಅನರ್ಹತೆಗಳನ್ನು ತಿಳಿಸಿ.

7. ಉತ್ಪಾದನಾ ಕೇಂದ್ರ ಪಿ$_1$, ಪಿ$_2$ ಮತ್ತು ಪಿ$_3$ ಗಳಿಂದ ಸರಕುಗಳನ್ನು ಎಂ$_1$, ಎಂ$_2$, ಎಂ$_3$ ಮತ್ತು ಎಂ$_4$ ನಂತಹ ವಿವಿಧ ಮಾರುಕಟ್ಟೆಗಳಿಗೆ ಸಾಗಿಸಬೇಕಾಗಿದೆ. ಈ ಮೂರು ಉತ್ಪಾದನಾ ಕೇಂದ್ರಗಳಲ್ಲಿ 250, 300 ಹಾಗೂ 350 ಟನ್‌ಗಳಷ್ಟು ಸಾಮಗ್ರಿ ಲಭ್ಯವಿದೆ. ಮಾರುಕಟ್ಟೆಯ ಅಗತ್ಯತೆಗಳು ಅನುಕ್ರಮವಾಗಿ 150, 250, 200 ಮತ್ತು 300 ಟನ್‌ಗಷ್ಟು. ವಿವಿಧ ಉತ್ಪಾದನಾ ಕೇಂದ್ರಗಳಿಂದ ಮಾರುಕಟ್ಟೆಗಳಿಗೆ ಸಾಗಾಣಿಸಲು ತಗುಲುವ ಯೂನಿಟ್ ವೆಚ್ಚಗಳನ್ನು ಈ ಕೆಳಗೆ ನೀಡಲಾಗಿದೆ :

| ಇಂದ/ಗೆ | ಎಂ$_1$ | ಎಂ೨ | ಎಂ$_3$ | ಎಂ$_4$ |
|---|---|---|---|---|
| ಪಿ$_1$ | 4 | 7 | 5 | 6 |
| ಪಿ$_2$ | 7 | 4 | 3 | 8 |
| ಪಿ$_3$ | 7 | 5 | 9 | 4 |

ಸಾಗಾಣಿಕೆಯ ಒಟ್ಟು ವೆಚ್ಚವನ್ನು ಕನಿಷ್ಠಗೊಳಿಸಬೇಕಾದರೆ ಅನುಕೂಲತಮ ಹಂಚಿಕೆ ಹೇಗಿರಬೇಕು ಎಂಬುದನ್ನು ನಿರ್ಣಯಿಸಿ.

8. ಕೆಳಗಿನ ವಿಷಯಗಳಿಗೆ ಕಿರುಟಿಪ್ಪಣಿ ಬರೆಯಿರಿ :

(i) ಸಾಮಾನ್ಯ ವಿತರಣೆಯ ಅನ್ವಯಗಳು

(ii) ನಿಶ್ಚಿತ, ಅನಿಶ್ಚಿತ ಹಾಗೂ ಗಂಡಾಂತರ ಸಂದರ್ಭಗಳಲ್ಲಿ ನಿರ್ಣಯ ಕೈಗೊಳ್ಳುವಿಕೆ

30/2

# 1999

# MANAGEMENT

## Paper 2

*Time : 3 Hours ]* *[ Maximum Marks : 300*

### *INSTRUCTIONS*

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket.*

*Candidates should attempt* ***five*** *questions in all selecting at least* ***one*** *from each Section.*

*All questions carry equal marks.*

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

*[Turn over*

## SECTION A

1. Elucidate the planning activities that all corporates must undertake in the context of domestic and export marketing.

2. (a) What kind of marketing strategies do you suggest to sustain rapid growth as long as possible ?

   (b) What are the risks involved in trying to enter foreign markets ? Explain.

3. (a) "In designing marketing channels, manufacturers have to struggle between what is ideal, what is feasible and what is available." Under the circumstances how are channel design decisions made ?

   (b) Explain the major factors that influence buying behaviour. Illustrate these influences for a hypothetical consumer named Mr. John, married, manager in an advertising agency.

## ವಿಭಾಗ A

1. ದೇಶದೊಳಗಿನ ಹಾಗೂ ರಫ್ತು ಮಾರುಕಟ್ಟೆ ವ್ಯಾಪಾರಕ್ಕೆ ಸಂಬಂಧಿಸಿದಂತೆ ಎಲ್ಲ ನಿಗಮಗಳೂ ಕೈಗೊಳ್ಳಬೇಕಾದ ಯೋಜನಾ ಚಟುವಟಿಕೆಗಳನ್ನು ನಿರೂಪಿಸಿ.

2. (ಎ) ಸಾಧ್ಯವಾದಷ್ಟೂ ದೀರ್ಘ ಕಾಲದವರೆಗೆ ತ್ವರಿತ ಬೆಳವಣಿಗೆಯನ್ನು ಕಾಯ್ದುಕೊಳ್ಳುವುದಕ್ಕಾಗಿ ಯಾವ ರೀತಿಯ ಮಾರುಕಟ್ಟೆ ವ್ಯಾಪಾರದ ತಂತ್ರಗಳನ್ನು ನೀವು ಸೂಚಿಸುತ್ತೀರಿ ?

   (ಬಿ) ವಿದೇಶೀ ಮಾರುಕಟ್ಟೆಗಳನ್ನು ಪ್ರವೇಶಿಸುವಲ್ಲಿ ಇರುವ ಸಂಭಾವ್ಯ ಅಪಾಯಗಳು (Risks) ಯಾವುವು ?

3. (ಎ) "ಮಾರುಕಟ್ಟೆ ವ್ಯಾಪಾರದ ದಾರಿಗಳನ್ನು ರೂಪಿಸಿಕೊಳ್ಳುವ ಸಂದರ್ಭದಲ್ಲಿ, ತಯಾರಕನು ಯಾವುದು ಅತ್ಯುತ್ತಮ, ಯಾವುದು ಅನುಕೂಲಕರ ಮತ್ತು ಯಾವುದು ಲಭ್ಯವಿದೆ ಎಂಬುವುಗಳ ಬಗ್ಗೆ ಚಿಂತಿಸಬೇಕಾಗುತ್ತದೆ." – ಇಂತಹ ಸಂದರ್ಭದಲ್ಲಿ ಮಾರ್ಗವಿನ್ಯಾಸ ನಿರ್ಣಯಗಳನ್ನು (channel design decisions) ಮಾಡುವುದು ಹೇಗೆ ?

   (ಬಿ) ಕೊಳ್ಳುವ ವರ್ತನೆಯ ಮೇಲೆ ಪ್ರಭಾವ ಬೀರುವ ಪ್ರಧಾನ ಸಂಗತಿಗಳು ಯಾವುವು ? ವಿವರಿಸಿ. ವಿವಾಹಿತನಾಗಿದ್ದು, ಒಂದು ಜಾಹಿರಾತು ಏಜೆನ್ಸಿಯಲ್ಲಿ ಮ್ಯಾನೇಜರ್ ಆಗಿ ಕೆಲಸಮಾಡುತ್ತಿರುವ ಶ್ರೀ ಜಾನ್ ಎಂಬ ವ್ಯಕ್ತಿಯನ್ನು ಒಬ್ಬ ಗ್ರಾಹಕನೆಂದು ಕಲ್ಪಿಸಿಕೊಂಡು, ಈ ಪ್ರಭಾವಗಳನ್ನು ನಿರೂಪಿಸಿ.

## SECTION B

4. (a) "The less analytical qualitative forecasting methods are followed for long-range forecasting and planning facilities decision. More analytical models are used for operational planning." — Examine the above statement and identify the tools for forecasting.

   (b) What are the basic types of layout designs ? Explain their suitability for adoption.

5. What is Flexible Manufacturing System (FMS) ? Explain the salient features of FMS and its utility in our conditions.

6. (a) Determine the usefulness and limitations of the Economic Order Quantity.

   (b) What are the functions of materials management ?

## ವಿಭಾಗ B

4. (ಎ) "ದೀರ್ಘಾವಧಿ ಪೂರ್ವಾನುಮಾನಕ್ಕಾಗಿ ಹಾಗೂ ಸುವಿಧತೆಗಳ ಯೋಜನೆಯಲ್ಲಿ ಕಡಿಮೆ ವಿಶ್ಲೇಷಣಾತ್ಮಕ ಹಾಗೂ ಕಡಿಮೆ ಗುಣಾತ್ಮಕ ಪೂರ್ವಾನುಮಾನದ ವಿಧಾನಗಳನ್ನು ಉಪಯೋಗಿಸಲಾಗುತ್ತದೆ. ಕಾರ್ಯಾಚರಣೆಯ ಸಂದರ್ಭದಲ್ಲಿ ಅಧಿಕ ವಿಶ್ಲೇಷಣಾತ್ಮಕ ಮಾದರಿಗಳನ್ನು ಬಳಸಲಾಗುತ್ತದೆ." – ಮೇಲಿನ ಹೇಳಿಕೆಯನ್ನು ಪರಿಶೀಲಿಸಿ ಹಾಗೂ ಪೂರ್ವಾನುಮಾನದ ಸಾಧನಗಳು ಯಾವುವು ಎಂಬುದನ್ನು ಗುರುತಿಸಿ.

   (ಬಿ) ಲೇಔಟ್ ವಿನ್ಯಾಸದ ಮೂಲ ಮಾದರಿಗಳು ಯಾವುವು ? ಅವುಗಳ ಅಳವಡಿಕೆಯ ಸೂಕ್ತತೆಯನ್ನು ವಿವರಿಸಿ.

5. F.M.S. (ನಮ್ಯ ತಯಾರಿಕಾ ಪದ್ಧತಿ) ಎಂದರೇನು ? ಇದರ ವಿಶೇಷ ಲಕ್ಷಣಗಳನ್ನು ವಿವರಿಸಿ, ಹಾಗೂ ನಮ್ಮ ಸ್ಥಿತಿಗಳಿಗೆ ಅದು ಎಷ್ಟು ಉಪಯುಕ್ತ ಎಂಬುದನ್ನು ತಿಳಿಸಿ.

6. (ಎ) ಲಾಭಕರ ಆದೇಶ ಪರಿಮಾಣದ ಉಪಯೋಗ ಹಾಗೂ ಇತಿಮಿತಿಗಳನ್ನು ತಿಳಿಸಿ.

   (ಬಿ) ಸಾಮಗ್ರಿ ನಿರ್ವಹಣೆಯ ಪ್ರಕಾರ್ಯಗಳು ಯಾವುವು ?

## SECTION C

7. (a) "The financial method or tool refers to any logical method or technique to be employed for the purpose of accomplishing certain goals." — What are the goals in the above statement and what are the tools available for the finance manager in performing his job ?

   (b) "Financial ratios can be broadly divided into liquidity ratios and stability ratios." Mention some of them, illustrating their usefulness and significance.

8. (a) State any one theory of capital structure, explaining the relationship between capital structure, cost of capital and value of the firm.

   (b) What are the different sources of long-term financing ? Critically examine them.

9. (a) State the role of SEBI in controlling stocks and Indian stock markets.

   (b) What are the objectives of cash management ? What are the basic cash management problems ?

## ವಿಭಾಗ C

7. (ಎ) "ಹಣಕಾಸಿನ ವಿಧಾನ ಅಥವಾ ಸಾಧನ ಎಂಬುದು, ಕೆಲವು ಗುರಿಗಳನ್ನು ಸಾಧಿಸುವುದಕ್ಕಾಗಿ ಬಳಸಬೇಕಾದ ಯಾವುದೇ ತಾರ್ಕಿಕ ವಿಧಾನ ಅಥವಾ ತಂತ್ರವನ್ನು ಸೂಚಿಸುತ್ತದೆ." – ಮೇಲಿನ ಹೇಳಿಕೆಯಲ್ಲಿ ಅಂತಹ ಗುರಿಗಳು ಯಾವುವು ? ಮತ್ತು ಹಣಕಾಸು ನಿರ್ವಾಹಕರಿಗೆ ತಮ್ಮ ಕೆಲಸವನ್ನು ನಿರ್ವಹಿಸುವುದಕ್ಕಾಗಿ ಲಭ್ಯವಿರುವ ಸಾಧನಗಳು ಯಾವುವು ?

   (ಬಿ) "ಹಣಕಾಸಿನ ಅನುಪಾತಗಳನ್ನು ಸ್ಥೂಲವಾಗಿ ಲಿಕ್ವಿಡಿಟಿ ಅನುಪಾತಗಳು ಹಾಗೂ ಸ್ಥಿರತಾ ಅನುಪಾತಗಳು ಎಂದು ವಿಂಗಡಿಸಬಹುದು." ಇವುಗಳಲ್ಲಿ ಕೆಲವನ್ನು ಅವುಗಳ ಉಪಯೋಗ ಹಾಗೂ ಪ್ರಾಮುಖ್ಯತೆಗಳೊಂದಿಗೆ ತಿಳಿಸಿ.

8. (ಎ) ಬಂಡವಾಳ ರಚನೆ, ಬಂಡವಾಳ ವೆಚ್ಚ ಹಾಗೂ ಉದ್ದಿಮೆಯ ಮೌಲ್ಯ ಇವುಗಳ ನಡುವಿನ ಸಂಬಂಧವನ್ನು ವಿವರಿಸುವುದರೊಂದಿಗೆ ಬಂಡವಾಳ ರಚನೆ ಕುರಿತ ಯಾವುದಾದರೊಂದು ಸಿದ್ಧಾಂತವನ್ನು ನಿರೂಪಿಸಿ.

   (ಬಿ) ದೀರ್ಘಾವಧಿ ಹಣಕಾಸು ಒದಗಣೆಯ ವಿವಿಧ ಮೂಲಗಳು ಯಾವುವು ? ಅವುಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

9. (ಎ) ಸ್ಟಾಕ್‌ಗಳು ಹಾಗೂ ಭಾರತದ ಸ್ಟಾಕ್ ಮಾರುಕಟ್ಟೆಯ ನಿಯಂತ್ರಣದಲ್ಲಿ ಸೆಬಿ (SEBI) ಯ ಪಾತ್ರವೇನು ? ವಿವರಿಸಿ.

   (ಬಿ) ನಗದು ನಿರ್ವಹಣೆಯ ಧ್ಯೇಯಗಳೇನು ? ನಗದು ನಿರ್ವಹಣೆಯ ಮೂಲ ಸಮಸ್ಯೆಗಳು ಯಾವುವು ?

## SECTION D

10. (a) Every organisation, whether it be a business or government organisation, hires people. How should they work out their personnel plan ?

(b) Appraisal of employees serves several useful purposes. Bring out clearly the purposes behind performance appraisals.

11. (a) "Individually oriented training programmes do not prove to be of lasting benefit." — Do you agree ? Discuss.

(b) Job evaluation is useful in eliminating discrepancies of a wage payment system. State the discrepancies that are removed by job evaluation.

12. (a) What are the essentials of successful collective bargaining ?

(b) "Industrial relations is always a mixture of cooperation and conflict." — Discuss.

## ವಿಭಾಗ D

10. (ಎ) ವ್ಯಾಪಾರೀ ಸಂಸ್ಥೆಯಾಗಿರಲಿ, ಸರ್ಕಾರೀ ಸಂಸ್ಥೆಯಾಗಿರಲಿ, ಪ್ರತಿಯೊಂದು ಸಂಸ್ಥೆಯೂ ಜನಗಳನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಅವು ತಮ್ಮ ಸಿಬ್ಬಂದಿ ಯೋಜನೆಯನ್ನು ಹೇಗೆ ರೂಪಿಸಬೇಕು ?

(ಬಿ) ಉದ್ಯೋಗಿಗಳ ಮೌಲ್ಯ ಸಮೀಕ್ಷೆ (appraisal) ಯಿಂದ ಅನೇಕ ರೀತಿಯ ಪ್ರಯೋಜನಗಳಿವೆ. ಕಾರ್ಯನಿರ್ವಹಣಾ ಸಮೀಕ್ಷೆಯ ಹಿನ್ನೆಲೆಯಲ್ಲಿರುವ ಉದ್ದೇಶಗಳೇನು ಎಂಬುದನ್ನು ಸ್ಪಷ್ಟವಾಗಿ ನಿರೂಪಿಸಿ.

11. (ಎ) "ವ್ಯಕ್ತಿಕೇಂದ್ರಿತ ದೃಷ್ಟಿಯ ತರಬೇತಿ ಕಾರ್ಯಕ್ರಮಗಳಿಂದ ಹೆಚ್ಚು ಲಾಭವಿಲ್ಲ." – ಇದನ್ನು ನೀವು ಒಪ್ಪುತ್ತೀರಾ ? ಚರ್ಚಿಸಿ.

(ಬಿ) ಕಾರ್ಯ ಮೌಲ್ಯ ಸಮೀಕ್ಷೆಯು ಒಂದು ಮಜೂರಿ ಸಂದಾಯ ವ್ಯವಸ್ಥೆಯಲ್ಲಿರುವ ಏರುಪೇರುಗಳನ್ನು ನಿವಾರಿಸಲು ಉಪಯುಕ್ತ. ಕಾರ್ಯ ಮೌಲ್ಯ ಸಮೀಕ್ಷೆಯಿಂದ ಯಾವ ಏರುಪೇರುಗಳನ್ನು ನಿವಾರಿಸಬಹುದು ? ತಿಳಿಸಿ.

12. (ಎ) ಯಶಸ್ವೀ ಸಾಮೂಹಿಕ ಚೌಕಾಶಿಗೆ ಅಗತ್ಯವಾದ ಅಂಶಗಳೇನು ?

(ಬಿ) "ಕೈಗಾರಿಕಾ ಬಾಂಧವ್ಯವು ಯಾವಾಗಲೂ ಸಹಕಾರ ಮತ್ತು ಸಂಘರ್ಷದ ಮಿಶ್ರಣವಾಗಿದೆ." – ಚರ್ಚಿಸಿ.